ಶುರುಮಾಡಿ 'ಲಹರಿ' ಎಂಬ ಸಾಹಿತ್ಯಿಕ ಪತ್ರಿಕೆಯನ್ನು ತಂದರು. 'ಲಹರಿ' ಪತ್ರಿಕೆಗೆ ಅಂದಿನ ಪ್ರಸಿದ್ಧ ಸಾಹಿತಿಗಳಾದ ಗೋಪಾಲಕೃಷ್ಣ ಅಡಿಗ, ಜಿ.ಎಸ್. ಶಿವರುದ್ರಪ್ಪ, ಚಂದ್ರಶೇಖರ ಕಂಬಾರ, ಎಚ್.ಎಂ. ಚನ್ನಯ್ಯ, ಹು.ಕಾ. ಜಯದೇವ್, ಶ್ರೀನಿವಾಸರಾವ್, ಕೆ.ನ. ಶಿವತೀರ್ಥನ್, ಸುಮತೀಂದ್ರ ನಾಡಿಗ, ತೇಜಸ್ವಿ, ಶ್ರೀರಾಮ್ ಎಲ್ಲರೂ ಉತ್ಸಾಹದಿಂದ ಬರೆದರು. 'ಲಹರಿ'ಯಲ್ಲಿ ತೇಜಸ್ವಿ ತಮ್ಮ ಈಗಿನ ಸಾಹಿತ್ಯ ಕೃಷಿಗಿಂತ ಭಿನ್ನವಾದ 'ಪಂಪ–ಒಂದು ಮೌಲ್ಯ ವಿವೇಚನೆ' ಎಂಬ ಲೇಖನ ಬರೆದಿದ್ದಾರೆ. ಇದು ತೇಜಸ್ವಿ ಆಧುನಿಕ ಸಾಹಿತ್ಯದ ಜೊತೆಗೆ ನಮ್ಮ ಪ್ರಾಚೀನ ಕಾವ್ಯಗಳನ್ನು ಚೆನ್ನಾಗಿ ಅರಿತವರು ಎನ್ನುವುದನ್ನು ಸಾಬೀತುಪಡಿಸುತ್ತದೆ. ಮುಂದೆ ತೇಜಸ್ವಿಯವರ 'ಜುಗಾರಿ ಕ್ರಾಸ್' ಕಾದಂಬರಿಯ ಒಂದು ಅಧ್ಯಾಯದಲ್ಲಿ ಗುರುರಾಜ ಕವಿ ವಿರಚಿತ 'ದ್ವಿಸಂಧಾನ ಕಾವ್ಯಂ' ಎನ್ನುವುದರ ಪ್ರಸ್ತಾಪ ಹಾಗೂ ಪದ್ಯಗಳಿವೆ. ಈ ಪದ್ಯಗಳು ಭಾಮಿನಿ ಷಟ್ಪದಿಯಲ್ಲಿ ಬರೆಯಲ್ಪಟ್ಟಿವೆ. ವಿದ್ವಾಂಸರೊಬ್ಬರು ಫೋನ್ ಮಾಡಿ ಈ ಪದ್ಯಗಳು ಯಾವ ಕವಿ ಬರೆದದ್ದು ಎಂದು ವಿಚಾರಿಸಿದರು. ಶ್ರೀರಾಮ್ ಮೂಡಿಗೆರೆಯಲ್ಲಿ ಈ ಪದ್ಯಗಳ ಬಗ್ಗೆ ತೇಜಸ್ವಿಯವರನ್ನ ಕೇಳಿದಾಗ ತಮ್ಮ ಟೇಬಲ್ ಮೇಲಿದ್ದ ಬೋರ್ಡನ್ನು ತೇಜಸ್ವಿ ತೋರಿಸಿದ್ದರು. ಅದರ ಮೇಲೆ ಜುಗಾರಿ ಕ್ರಾಸಿನ ಪದ್ಯಗಳು ಯಥಾವತ್ತಾಗಿದ್ದವು!

'ಲಹರಿ' ಪತ್ರಿಕೆ ಅಲ್ಪಾಯುವಾದರೂ ಇದರಿಂದ ಸ್ಫೂರ್ತಿ ಪಡೆದ ಚಂದ್ರಶೇಖರ ಪಾಟೀಲರು ತಮ್ಮ ಗೆಳೆಯರಾದ ಸಿದ್ಧಲಿಂಗ ಪಟ್ಟಣಶೆಟ್ಟಿ, ಗಿರಡ್ಡಿ ಗೋವಿಂದರಾಜರ ಜತೆಗೂಡಿ 'ಸಂಕ್ರಮಣ' ಮಾಸಪತ್ರಿಕೆ ನಡೆಸಿದರು. ಈ ಪತ್ರಿಕೆ ಬಹಳ ವರ್ಷಗಳ ಕಾಲ ಯಶಸ್ವಿಯಾಗಿ ನಡೆಯಿತು.

'ಲಹರಿ'ಯಿಂದ ಬೀಜಾಂಕುರವಾದ ಪ್ರಕಾಶನದ ಆಸೆ 1991ರಲ್ಲಿ ಮೊಳೆತು ತೇಜಸ್ವಿ, ಶ್ರೀರಾಮ್ ಮತ್ತು ನಮ್ಮೆಲ್ಲರ ಸ್ನೇಹಿತ, ತೇಜಸ್ವಿಯವರ ಸಮೀಪದ ಬಂಧು ಮತ್ತು ನಿರಂತರ ಒಡನಾಡಿ ರಾಘವೇಂದ್ರ ಮೂವರೂ ಸೇರಿ 'ಪುಸ್ತಕ ಪ್ರಕಾಶನ' ಪ್ರಾರಂಭವಾಗಿಯೇ ಬಿಟ್ಟಿತು. 'ಪುಸ್ತಕ ಪ್ರಕಾಶ'ನ ಹೊರತಂದ ಮೊದಲ ಕೃತಿ 'ಪರಿಸರದ ಕತೆ'. 'ಪುಸ್ತಕ ಪ್ರಕಾಶನ'ದಿಂದ ಈ ಜಗತ್ತಿನ ಆಗುಹೋಗುಗಳನ್ನು ಆಧರಿಸಿದ ಅನೇಕ ಕೃತಿಗಳು ಬಂದು ಅವು ಓದುಗರ ಮನ ಸೆರೆಹಿಡಿದವು. ಇಂದು ಪರಿಸರ ಎನ್ನುವ ಮಾತು ಬಹಳವಾಗಿ ಕೇಳಿ ಬರುತ್ತಿದೆ. ನಮ್ಮ ಪರಿಸರ ಅಂದರೆ ನಮ್ಮ ಸುತ್ತಲಿರುವ ನದಿ, ಬೆಟ್ಟ, ಬಯಲು, ಪ್ರಾಣಿ, ಪಕ್ಷಿ, ಕೀಟಗಳು ಭೂಮಿ ಇವೆಲ್ಲವುಗಳ ಮಧ್ಯೆ ನಿಂತು ಯೋಚಿಸುತ್ತಿರುವ ಮನುಷ್ಯನೂ ನಮ್ಮನ್ನು ಆವರಿಸಿರುವ ಪರಿಸರದ ಒಂದು ಭಾಗ ಎನ್ನುವುದನ್ನು ಮನದಟ್ಟು ಮಾಡಲು ತೇಜಸ್ವಿ ಅನೇಕ ಕೃತಿಗಳನ್ನು ರಚಿಸಿದರು. ಅನೇಕ ಕುತೂಹಲಕಾರಿ ವಿಷಯಗಳನ್ನು ನಮಗೆ ತೇಜಸ್ವಿ ತೆರೆದು ತೋರಿದರು ಮತ್ತು ಅವರಿಂದಾಗಿ ನಮ್ಮಲ್ಲಿ ನಮ್ಮ ಸುತ್ತಲಿನ ಪರಿಸರದ ಬಗ್ಗೆ ಜಾಗೃತಿ ಉಂಟಾಯಿತು. ಎಲ್ಲಕ್ಕಿಂತ ಯುವಪೀಳಿಗೆ ಅವರ ಕೃತಿಗಳಿಂದ ಹೆಚ್ಚು ಆಕರ್ಷಿತವಾಯಿತು. ತೇಜಸ್ವಿ ಯುವಜನತೆಯ ಬಗ್ಗೆ ಹೆಚ್ಚು ಭರವಸೆಯನ್ನಿಟ್ಟುಕೊಂಡಿದ್ದರು.

ತೇಜಸ್ವಿಯವರದ್ದು ಮೂಲತಃ ಕುತೂಹಲಭರಿತ ಸ್ವಭಾವ. ವಾಹನದ ರಿಪೇರಿಯಾಗಲಿ, ಗಹನವಾದ ಚಿಂತನೆಯನ್ನು ಅರ್ಥ ಮಾಡಿಕೊಳ್ಳುವುದಾಗಲಿ ಅಥವಾ ಉಪಗ್ರಹ, ಕೃಷ್ಣಕಾಯ, ಬ್ಲಾಕ್ ಹೋಲ್ ಇಂತಹ ಕ್ಲಿಷ್ಟವಾದ ವಿಷಯಗಳನ್ನು ಗಂಭೀರವಾಗಿ ಅಧ್ಯಯನ ಮಾಡಿ, ಸರಳವಾಗಿ ಸಾಮಾನ್ಯ ಓದುಗರಿಗೆ ಸಂವಹನಗೊಳ್ಳುವಂತೆ ಬರೆಯುವ ಜಾಣ್ಮೆ, ತನ್ನ ಜನರಿಗೆ ತಾನು ತಿಳಿದಿದ್ದೆಲ್ಲವನ್ನೂ ಹೇಳಬೇಕೆಂಬ ಹಂಬಲ ತೇಜಸ್ವಿಯವರನ್ನು ಎಲ್ಲರಂತಲ್ಲದ ವಿಶಿಷ್ಟ ಲೇಖಕರನ್ನಾಗಿಸಿದೆ.

ತೇಜಸ್ವಿಯವರ ಮೊದಲ ತೋಟ 'ಚಿತ್ರಕೂಟ'ದ ಪಕ್ಕದ ಕಾಡಿಗೆ ಬೆಂಕಿ ಬಿದ್ದಾಗ ಒಂದು ಗಿಣಿ ತೇಜಸ್ವಿ ತೋಟಕ್ಕೆ ಬಂದಿತು. ಅದನ್ನು ಗಮನಿಸಿದಾಗ ಗಿಣಿಯ ಒಂದು ಕಣ್ಣು ಸುಟ್ಟು ಹೋಗಿತ್ತು. ಒಂಟಿ ಕಣ್ಣಿನ ಗಿಣಿಯ ಹಾರಾಟ, ಆಹಾರಕ್ಕಾಗಿ ಅದು ಪಡುತ್ತಿದ್ದ ಪರಿಪಾಟಲನ್ನು ಗಮನಿಸಿದ ತೇಜಸ್ವಿ